ಬೆಂಗಳೂರು
ಅಜಿತ್ ಸಾಗರ್.ಎನ್. ಪ್ರಧಾನ ಸಂಪಾದಕರು
ಇಂದು ಸಂಜೆ
ನೈಜ ಸುದ್ದಿಗಳ ಸಮಗ್ರ ಚಿತ್ರಣ
INDU SANJE, Kannada evening daily
RNI: KAR/KAN/58071/93
ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ರಾಮನಗರ, ಹುಬ್ಬಳ್ಳಿಯಿಂದ ಏಕಕಾಲಕ್ಕೆ ಪ್ರಕಟಿತ
Bangalore, Mysore, Mandya, Hassan, Kolar, Chikkaballapur, Chamarajnagara, Ramanagara, Hubbali Published simultaneously
ವಿ.ನಾಗರಾಜು, ಸಂಸ್ಥಾಪಕರು
15_3_2024-2
15 Mar 2024
POWERED BY. KHUSHI HOST™

# ಬಡ ಕುಟುಂಬಗಳಿಗೆ ನೆರವಾಗಿದ್ದ ಡಾ.ಮೊಹಮ್ಮದ್ ಮಜ್ಜೀದ್ ನಿಧನ

**ನೆಲಮಂಗಲ:** ತಾಲ್ಲೂಕಿನ ಸೋಂಪುರ ಕೈಗಾರಿಕಾ ವಸಾಹತು ಮತ್ತು ನಗರಕ್ಕೆ ಸನಿಹದ ಬಾವಿಕೆರೆ ಸೇರಿದಂತೆ ರಾಜ್ಯ ಹಲವಾರು ಕಡೆಗಳಲ್ಲಿ ತಮ್ಮದೇ ಆದ ಕೈಗಾರಿಕೆಯನ್ನು ಸಂಸ್ಥಾಪಿಸಿ ಸಹಸ್ರಾರು ಕಾರ್ಮಿಕರನ್ನು ಸೃಷ್ಟಿಸಿ ನೂರಾರು ಕುಟುಂಬಗಳಿಗೆ ಜೀವನಾಧಾರ ವಾಗಿದ್ದಂತಹ ಸಮಿ ಸಭೀನಾ ಗ್ರೂಪ್ಸ್ ಲಿಮಿಟೆಡ್ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿರದ್ದ ಡಾ.ಮೊಹಮ್ಮದ್ ಮಜ್ಜೀದ್ ಅವರು ಅನಾರೋಗ್ಯದಿಂದ ಚೆನ್ನೈ ಯಲ್ಲಿ ಇಂದು ಅಸುನೀಗಿದ್ದಾರೆ.



ಮೃತರು ಬೆಂಗಳೂರು ನಗರದ ಪೀಣ್ಯದಲ್ಲಿ ಕೇಂದ್ರ ಕಛೇರಿನ್ನು ಇರಿಸಿಕೊಂಡು, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ಸೋಂಪುರ, ತುಮಕೂರು ಜಿಲ್ಲೆಯ ಕುಣಿಗಲ್ ಸೇರಿದಂತೆ ಕರ್ನಾಟಕ ರಾಜ್ಯ ಹಾಗೂ ಹೊರ ರಾಜ್ಯಗಳು ಮತ್ತು ದೇಶದ ವಿವಿಧ ಭಾಗಗಲ್ಲಿ ಮೆಡಿಸಿನ್ ಮತ್ತು ಜನಜೀವನಕ್ಕೆ ಪೂರಕ ಔಷಧೋಪಾಯ ವಸ್ತುಗಳ ತಯಾರಿಕೆಯ ಸಮಿ ಸಭೀನಾ ಗ್ರೂಪ್ಸ್ ಲಿಮಿಟೆಡ್ ಕಂಪನಿಯನ್ನು ತೆರೆಯುವ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಗೂ ಜಾಗತಿಕ ಮಟ್ಟದಲ್ಲಿ ಉತ್ತಮ ಕಂಪನಿ ಎಂಬ ಹೆಸರನ್ನು ಗಳಿಸುವ ಮೂಲಕ ದೇಶದ ಆರೋಗ್ಯಕರ ಸಂಬಂಧವಾಗಿ ಮುಂಚೂಣ ಕಂಪನಿಯಾಗಿ ಹೊರಹೊಮ್ಮಲು ಮೂಲ ಕಾರ್ಯತಂತ್ರಗಳನ್ನು ಹೊಂದಿದ್ದ ಸಂಸ್ಥೆಯನ್ನಾಗಿಸಲು ಮೃತರು ಪ್ರಯತ್ನಿಸಿದ್ದರು.

ಈ ಕಂಪನಿಯಲ್ಲಿ ಬಹುತೇಕ ಕನ್ನಡಿಗರಿಗೆ ಆದ್ಯತೆಯನ್ನು ನೀಡುವ ಮೂಲಕ ತಮ್ಮ ಕಂಪನಿ ಕಾರ್ಯಕ್ಷಮತೆಯನ್ನು ಕಾಳಜಿಯಿಂದ ಉತ್ತುಂಗ ಮಟ್ಟದಲ್ಲಿ ಉಳಿಸಿಕೊಳ್ಳಲು ಕಂಪನಿ ಸಂಸ್ಥಾಪಕ ನಿರ್ದೇಶಕ ಡಾ.ಮೊಹಮ್ಮದ್ ಮಜ್ಜೀದ್ ಮುತುವರ್ಜಿ ವಹಿಸಿದ್ದರಲ್ಲದೇ ಬಡ ಮತ್ತು ಮಧ್ಯಮ ವರ್ಗದ ಪ್ರತಿಭಾವಂತರಿಗೆ ಉದ್ಯೋಗ ನೀಡುವ ಮೂಲಕ ರಾಜ್ಯದ ಸಹಸ್ರಾರು ನಿರುದ್ಯೋಗಸ್ಥ ಬಡ ಕುಟುಂಬಗಳಿಗೆ ನೆರವಾಗಿದ್ದರು.

ಡಾಕ್ಟರ್ ಎಂದೇ ಕರೆಯಿಸಿಕೊಳ್ಳುತ್ತಿದ್ದ ಡಾ.ಮೊಹಮ್ಮದ್ ಮಜ್ಜೀದ್ ಇವರ ಅಕಾಲಿಕ ಮರಣದಿಂದ ಎಲ್ಲಾ ಕಾರ್ಮಿಕ ಬಳಗ ಮತ್ತು ಸಹ ಕಂಪನಿಯ ಎಲ್ಲ ವರ್ಗದವರೂ ಮರುಗುತ್ತಿದ್ದು ಮೃತರ ಆತ್ಮಕ್ಕೆ ಶಾಂತಿಯನ್ನು ಭಗವಂತ ಕರುಣ ಸಲೆಂದು ಪ್ರಾರ್ಥಿಸಿದ್ದಾರೆ. ಅವರ ಕುಟುಂಬಕ್ಕೆ ಇಂತಹ ಸಂಧಿಗ್ದ ಪರಿಸ್ಥಿತಿಯಲ್ಲಿ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕರುಣ ಸಲೆಂದು ಕಾರ್ಮಿಕರ ಸಮೂಹ ಪ್ರಾರ್ಥಿಸಿದ್ದಾರೆ.

VK
ವಿಜಯ ಕರ್ನಾಟಕ

14 / 3 / 24

# ಡಾ.ಮೊಹಮ್ಮದ್ ನಿಧನ

**ನೆಲಮಂಗಲ:** ತಾಲೂಕಿನ ಸೋಂಪುರ ಕೈಗಾರಿಕಾ ವಸಾಹತು ಮತ್ತು ನಗರಕ್ಕೆ ಸಮೀಪದ ಬಾವಿಕೆರೆ ಸೇರಿದಂತೆ ರಾಜ್ಯದ ಹಲವಾರು ಕಡೆಗಳಲ್ಲಿ ತಮ್ಮದೇ ಆದ ಕೈಗಾರಿಕೆಯನ್ನು ಸಂಸ್ಥಾಪಿಸಿ ಸಾವಿರಾರು ಕಾರ್ಮಿಕರ ಕುಟುಂಬಗಳಿಗೆ ಜೀವನಾಧಾರವಾಗಿದ್ದಂತಹ ಸಮಿ ಸಬೀನಾ ಗ್ರೂಪ್ಸ್ ಲಿಮಿಟೆಡ್ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಡಾ.ಮೊಹಮ್ಮದ್ ಮಜ್ಜೀದ್ ಅವರು ಚೆನ್ನೈಯಲ್ಲಿ ಬುಧವಾರ ನಿಧನರಾದರು.



ಮೃತರು ಬೆಂಗಳೂರು ನಗರದ ಪೀಣ್ಯದಲ್ಲಿ ಕೇಂದ್ರ ಕಚೇರಿಯನ್ನು ಇರಿಸಿಕೊಂಡು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ಸೋಂಪುರ, ತುಮಕೂರು ಜಿಲ್ಲೆಯ ಕುಣಿಗಲ್ ಸೇರಿದಂತೆ ಕರ್ನಾಟಕ ರಾಜ್ಯ ಹಾಗೂ ಹೊರ ರಾಜ್ಯಗಳು ಮತ್ತು ದೇಶದ ವಿವಿಧ ಭಾಗಗಲ್ಲಿ ಮೆಡಿಸಿನ್ ಮತ್ತು ಜನಜೀವನಕ್ಕೆ ಪೂರಕ ಔಷಧೋಪಾಯ ವಸ್ತುಗಳ ತಯಾರಿಕೆಯ ಸಮಿ ಸಬೀನಾ ಗ್ರೂಪ್ಸ್ ಲಿ. ಕಂಪನಿಯನ್ನು ತೆರೆಯುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾಗೂ ಜಾಗತಿಕ ಮಟ್ಟದಲ್ಲಿ ಉತ್ತಮ ಕಂಪನಿಯೆಂಬ ಹೆಸರನ್ನು ಗಳಿಸುವಲ್ಲಿ ಶ್ರೀಯುತರು ಪ್ರಯತ್ನಿಸಿದ್ದರು.